All India Radio: Bangalore
National Bulletin In Kannada
28.04.2025  19.35 p.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪುರಸ್ಕೃತರಿಗೆ ಪದ್ಮ ಪ್ರಶಸ್ತಿ ಪ್ರದಾನ
- ಇಪ್ಪತ್ತಾರು ರಫೇಲ್ ಕಡಲ ಯುದ್ಧ ವಿಮಾನಗಳ ಖರೀದಿಗೆ ಭಾರತ-ಫ್ರಾನ್ಸ್ ಒಪ್ಪಂದ
- ವೇವ್ಸ್ ೨೦೨೫: ಮಾಧ್ಯಮ, ಮನರಂಜನಾ ವಲಯ ಮರು ವ್ಯಾಖ್ಯಾನಿಸುವ ಚಳವಳಿ- ಸಚಿವ ಡಾ.ಎಲ್.ಮುರುಗನ್
- ಐಪಿಎಲ್ ಟಿ-೨೦ ಕ್ರಿಕೆಟ್: ಗುಜರಾತ್ ಟೈಟಾನ್ಸ್ ವಿರುದ್ಧ ಟಾಸ್ ಗೆದ್ದ ರಾಜಸ್ಥಾನ ರಾಯಲ್ಸ್ ತಂಡ ಫೀಲ್ಡಿಂಗ್ ಆಯ್ಕೆ

***************

ನವದೆಹಲಿಯ ರಾಷ್ಟ್ರಪತಿ ಭವನದಲ್ಲಿಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಪದ್ಮ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

ಈ ವರ್ಷದ ಗಣರಾಜ್ಯೋತ್ಸವದ ಮುನ್ನಾದಿನದಂದು, ಸರ್ಕಾರವು ಏಳು ಪದ್ಮವಿಭೂಷಣ, ೧೯ ಪದ್ಮಭೂಷಣ ಮತ್ತು ೧೧೩ ಪದ್ಮಶ್ರೀ ಪ್ರಶಸ್ತಿಗಳನ್ನು ಒಳಗೊಂಡ ೧೩೯ ಪದ್ಮ ಪ್ರಶಸ್ತಿಗಳನ್ನು ಘೋಷಿಸಿತ್ತು.

ಈ ಪೈಕಿ ರಾಜ್ಯದ ಒಂಬತ್ತು ಮಂದಿ ಪದ್ಮ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಪಿಟೀಲು ವಾದಕ ಮತ್ತು ಸಂಯೋಜಕ ಡಾ. ಎಲ್.ಸುಬ್ರಮಣಿಯಂ ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಹಿರಿಯ ಸಂಪಾದಕ ಮತ್ತು ಪ್ರಸಾರ ಭಾರತಿ ಮಾಜಿ ಅಧ್ಯಕ್ಷ ಎ.ಸೂರ್ಯ ಪ್ರಕಾಶ್, ಚಲನಚಿತ್ರ ನಟರಾದ ಅನಂತ್ ನಾಗ್, ಪದ್ಮಭೂಷಣ ಪ್ರಶಸ್ತಿಗೆ ಪುರಸ್ಕೃತರಾಗಿದ್ದಾರೆ.

ಕಲಾ ಕ್ಷೇತ್ರದ ಸಾಧನೆಗಾಗಿ ಬಾಗಲಕೋಟೆಯ ಭೀಮವ್ವ ದೊಡ್ಡ ಬಾಳಪ್ಪ ಶಿಳ್ಳೆಕ್ಯಾತರ, ಹಾಸನ ರಘು, ಉದ್ಯಮ ಕ್ಷೇತ್ರದಿಂದ ಪ್ರಶಾಂತ್ ಪ್ರಕಾಶ್, ಕಲಾ ಕ್ಷೇತ್ರದ ಸಾಧನೆಗಾಗಿ ರಿಕ್ಕಿ ಕೇಜ್, ಜಾನಪದ ಗಾಯಕ ವೆಂಕಪ್ಪ ಅಂಭಾಜಿ ಸುಗತೇಕರ, ಹಿರಿಯ ಕ್ಯಾನ್ಸರ್ ಚಿಕಿತ್ಸಾ ತಜ್ಞೆ ವಿಜಯಲಕ್ಷ್ಮೀ ದೇಶಮಾನೆ ಪದ್ಮ ಪ್ರಶಸ್ತಿಗೆ ಭಾಜನರಾಗಿದ್ದಾರೆ.

***************

ಭಾರತ ಇಂದು ಫ್ರಾನ್ಸ್ ಜೊತೆ ೨೬ ರಫೇಲ್ ಕಡಲ ಯುದ್ಧ ವಿಮಾನಗಳನ್ನು ಖರೀದಿಸಲು ರಕ್ಷಣಾ ಒಪ್ಪಂದಕ್ಕೆ ಸಹಿ ಹಾಕಿವೆ.

ರಕ್ಷಣಾ ಸಚಿವಾಲಯ ಮತ್ತು ಫ್ರಾನ್ಸ್ ಸರ್ಕಾರದ ಅಧಿಕಾರಿಗಳ ಸಮ್ಮುಖದಲ್ಲಿ ನವದೆಹಲಿಯಲ್ಲಿಂದು ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು. ೨೬ ರಫೇಲ್ ಯುದ್ಧ ವಿಮಾನಗಳ ಪೈಕಿ ೨೨ ಯುದ್ಧ ವಿಮಾನಗಳು ಏಕ ಆಸನ ಮತ್ತು ೪ ಯುದ್ಧ ವಿಮಾನಗಳು ಎರಡು ಆಸನಗಳನ್ನು ಹೊಂದಿರುತ್ತವೆ. ಇವುಗಳನ್ನು ಭಾರತೀಯ ನೌಕಾ ಪಡೆಯ ಅವಶ್ಯಕತೆಗೆ ಅನುಗುಣವಾಗಿ ವಿನ್ಯಾಸಗೊಳಿಸಲಾಗುತ್ತದೆ ಮತ್ತು ಸಿದ್ಧಪಡಿಸಲಾಗುತ್ತದೆ.

ರಫೇಲ್ ಯುದ್ಧ ವಿಮಾನಗಳ ಸೇರ್ಪಡೆಯಿಂದ ಭಾರತೀಯ ನೌಕಾಪಡೆಯ ಬಲ ಮತ್ತಷ್ಟು ಹೆಚ್ಚಾಗಲಿದೆ. ಈ ಯುದ್ಧ ವಿಮಾನಗಳನ್ನು ಐಎನ್ಎಸ್ ವಿಕ್ರಮಾದಿತ್ಯ ಮತ್ತು ಐಎನ್ಎಸ್ ವಿಕ್ರಾಂತ್‌ನಂತಹ ವಿಮಾನ ವಾಹಕ ನೌಕೆಗಳಲ್ಲಿ ನಿಯೋಜಿಸಲಾಗುತ್ತದೆ. ರಫೇಲ್ ಯುದ್ಧ ವಿಮಾನಗಳು ಸುಧಾರಿತ ಶಸ್ತ್ರಾಸ್ತ್ರ ವ್ಯವಸ್ಥೆ ಮತ್ತು ಕ್ಷಿಪಣಿ ವ್ಯವಸ್ಥೆಗಳನ್ನು ಹೊಂದಿರುತ್ತವೆ.

***************

ಭಾರತೀಯ ರಾಷ್ಟ್ರೀಯ ಪತ್ರಾಗಾರ-ಎನ್ಎಐ, ನವದೆಹಲಿಯಲ್ಲಿ ಇಂದು ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ.ಅಬ್ದುಲ್ ಕಲಾಂ ಅವರ ಖಾಸಗಿ ಪತ್ರಸಂಗ್ರಹವನ್ನು ಸ್ವೀಕರಿಸಿದೆ. ಡಾ. ಕಲಾಂ ಅವರ ಕುಟುಂಬದಿಂದ ಪತ್ರಗಳನ್ನು ಸ್ವೀಕರಿಸಲಾಯಿತು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಲಿಖಿತ ಭಂಡಾರ ಸಂಸ್ಥೆಯ ಮಹಾನಿರ್ದೇಶಕ ಅರುಣ್ ಸಿಂಘಾಲ್ ಆಕಾಶವಾಣಿಯೊಂದಿಗೆ ಮಾತನಾಡಿ, ಮಾಜಿ ರಾಷ್ಟ್ರಪತಿಗಳ ದಸ್ತಾವೇಜುಗಳ ಸಂಗ್ರಹವನ್ನು ಒಟ್ಟುಗೂಡಿಸುವ ಪ್ರಕ್ರಿಯೆಯಲ್ಲಿ ರಾಷ್ಟ್ರೀಯ ಲಿಖಿತ ಭಂಡಾರ ಸಂಸ್ಥೆ ತೊಡಗಿಸಿಕೊಂಡಿದೆ ಎಂದು ತಿಳಿಸಿದ್ದಾರೆ.

ಡಾ. ರಾಜೇಂದ್ರ ಪ್ರಸಾದ್ ಮತ್ತು ವಿ.ವಿ.ಗಿರಿ ಅವರಂತೆ ಹಲವಾರು ಮಾಜಿ ರಾಷ್ಟ್ರಪತಿಗಳ ದಾಖಲೆಗಳು ಈಗಾಗಲೇ ಸಂಸ್ಥೆಯಲ್ಲಿವೆ ಎಂದು ಅವರು ಮಾಹಿತಿ ನೀಡಿದರು.

ಭಾರತದ ರಾಷ್ಟ್ರೀಯ ಲಿಖಿತ ದಸ್ತಾವೇಜುಗಳ ಭಂಡಾರ ಸಂಸ್ಥೆಯು ಸರ್ಕಾರದ ಅಪ್ರಚಲಿತ ದಾಖಲೆಗಳ ರಕ್ಷಕ ಸಂಸ್ಥೆಯಾಗಿದ್ದು, ೧೯೯೩ರ ಸಾರ್ವಜನಿಕ ದಾಖಲೆ ಕಾಯ್ದೆಯಡಿ ಆಡಳಿತಗಾರರು ಮತ್ತು ಸಂಶೋಧಕರ ಉಪಯೋಗಕ್ಕಾಗಿ ಇವನ್ನು ಸಂರಕ್ಷಿಸುತ್ತಿದೆ ಎಂದು ಅರುಣ್ ಸಿಂಘಾಲ್ ಹೇಳಿದರು.

***************

ಒಟಿಟಿ ವೇದಿಕೆಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಅಶ್ಲೀಲ ವಿಷಯವನ್ನು ನಿಯಂತ್ರಿಸುವಂತೆ ಕೋರಿ ಸಲ್ಲಿಸಲಾದ ಅರ್ಜಿಯ ವಿಚಾರಣೆಗೆ ಸುಪ್ರೀಂಕೋರ್ಟ್ ಇಂದು ಸಮ್ಮತಿಸಿದೆ.

ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ಎ.ಜಿ.ಮಸಿಹ್ ಅವರನ್ನೊಳಗೊಂಡ ನ್ಯಾಯ ಪೀಠವು, ಕೇಂದ್ರ ಸರ್ಕಾರ ಮತ್ತು ಒಟಿಟಿ ವೇದಿಕೆಗಳು ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್, ಆಲ್ಟ್ ಬಾಲಾಜಿ, ಉಲ್ಲು ಡಿಜಿಟಲ್, ಮುಬಿ ಹಾಗೂ ಸಾಮಾಜಿಕ ಮಾಧ್ಯಮ ವೇದಿಕೆಗಳು ಎಕ್ಸ್ ಕಾರ್ಪ್, ಗೂಗಲ್, ಮೆಟಾ ಇಂಕ್ ಮತ್ತು ಆಪಲ್‌ಗೆ ನೋಟಿಸ್ ಜಾರಿ ಮಾಡಿದೆ.

ಇದೇ ರೀತಿಯ ಇತರೆ ಬಾಕಿ ಇರುವ ಅರ್ಜಿಗಳನ್ನು ನ್ಯಾಯಪೀಠವು ಈ ಅರ್ಜಿಯೊಂದಿಗೆ ಲಗ್ಗತ್ತಿಸಿದೆ.

***************

ಪಹಲ್ಗಾಮ್ ಭಯೋತ್ಪಾದಕ ದಾಳಿ ಬೆನ್ನಲ್ಲೆ ಭಾರತದ ವಿರುದ್ಧ ತಪ್ಪು ಮಾಹಿತಿಯನ್ನು ಪ್ರಸಾರ ಮಾಡುತ್ತಿದ್ದ ಡಾನ್ ನ್ಯೂಸ್, ಸಮಾ ಟಿವಿ, ಅರಿ ನ್ಯೂಸ್ ಮತ್ತು ಜಿಯೊ ನ್ಯೂಸ್ ಸೇರಿದಂತೆ ಒಟ್ಟು ೧೬ ಪಾಕಿಸ್ತಾನಿ ಯೂಟ್ಯೂಬ್ ಚಾನಲ್‌ಗಳನ್ನು ಕೇಂದ್ರ ಗೃಹ ಸಚಿವಾಲಯದ ನಿರ್ದೇಶನದಂತೆ ನಿಷೇಧಿಸಲಾಗಿದೆ.

ಈ ನಿಷೇಧಿತ ಚಾನಲ್‌ಗಳು ೬೩ ದಶಲಕ್ಷಕ್ಕೂ ಅಧಿಕ ಚಂದಾದರರನ್ನು ಹೊಂದಿದ್ದವು. ಈ ನಡುವೆ ಪಹಲ್ಗಾಮ್ ಭಯೋತ್ಪಾದಕ ದಾಳಿಯ ಬಗ್ಗೆ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೋರೇಷನ್ - ಬಿಬಿಸಿಯ ವರದಿ ಕುರಿತು ಆಕ್ಷೇಪ ವ್ಯಕ್ತಪಡಿಸಿರುವ ಕೇಂದ್ರ ಸರ್ಕಾರ, ಭಾರತದ ಬಿಬಿಸಿ ಮುಖ್ಯಸ್ಥರಿಗೆ ಈ ಘಟನೆ ಕುರಿತ ದೇಶದ ಭಾವನೆಯನ್ನು ತಿಳಿಸಿದೆ.

ವಿದೇಶಾಂಗ ಸಚಿವಾಲಯ ಬಿಬಿಸಿ ವರದಿಯ ಮೇಲ್ವಿಚಾರಣೆ ನಡೆಸಲಿದೆ.

***************

ಭಯೋತ್ಪಾದನೆ ವಿರುದ್ಧ ಜಮ್ಮು ಮತ್ತು ಕಾಶ್ಮೀರ ಸಿಡಿದೆದ್ದಿದೆ ಎಂದು ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ಹೇಳಿದ್ದಾರೆ.

ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದನಾ ದಾಳಿ ಖಂಡಿಸಿ, ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯ ವಿಶೇಷ ಅಧಿವೇಶನದಲ್ಲಿ ಮಾತನಾಡಿದ ಅವರು, ಜಮ್ಮು-ಕಾಶ್ಮೀರ ಪ್ರದೇಶದಾದ್ಯಂತ ಭಯೋತ್ಪಾದನಾ ದಾಳಿಯನ್ನು ವ್ಯಾಪಕವಾಗಿ ಖಂಡಿಸಿರುವ ಸಾರ್ವಜನಿಕರ ನಡೆಯನ್ನು ಶ್ಲಾಘಿಸಿದರು.

ಭಯೋತ್ಪಾದನೆಯನ್ನು ಸಂಪೂರ್ಣವಾಗಿ ಅಂತ್ಯಗೊಳಿಸುವ ಕಾಲ ಶುರುವಾಗಿದ್ದು, ಭಯೋತ್ಪಾದನೆಯನ್ನು ತಿರಸ್ಕರಿಸಲು ಕಾಶ್ಮೀರಿಗಳು ಒಟ್ಟಾಗಿದ್ದಾರೆ. ಜನರೆಲ್ಲರೂ ಒಗ್ಗಟ್ಟಾಗಿ ನಿಂತಾಗ ಭಯೋತ್ಪಾದನೆ ಕೊನೆಗೊಳ್ಳುತ್ತದೆ ಎಂದು ಓಮರ್ ಅಬ್ದುಲ್ಲಾ ಹೇಳಿದರು.

***************

ರಾಷ್ಟ್ರೀಯ ತನಿಖಾ ದಳ- ಎನ್‌ಐಎ ವಶದಲ್ಲಿರುವ ೨೬/೧೧ ಮುಂಬೈ ಉಗ್ರರ ದಾಳಿಯ ರೂವಾರಿ ತಹವುರ್ ಹುಸೇನ್ ರಾಣಾನ ಕಸ್ಟಡಿ ಅವಧಿಯನ್ನು ೧೨ ದಿನಗಳವರೆಗೆ ವಿಸ್ತರಿಸಲಾಗಿದೆ.

ಅಮೆರಿಕಾದಿಂದ ಇತ್ತೀಚೆಗೆ ಗಡಿಪಾರಾಗಿದ್ದ ಹುಸೇನ್ ರಾಣಾನನ್ನು ಇಂದು ನ್ಯಾಯಾಲಯದ ಮುಂದೆ ಎನ್‌ಐಎ ಹಾಜರುಪಡಿಸಿತ್ತು. ವಿಚಾರಣೆ ನಡೆಸಿದ ನ್ಯಾಯಾಲಯ, ಈಗಾಗಲೇ ೧೮ ದಿನಗಳ ಕಾಲ ಎನ್‌ಐಎ ವಶದಲ್ಲಿರುವ ರಾಣಾನನ್ನು ಮತ್ತೆ ೧೨ ದಿನಗಳ ಕಾಲ ರಾಷ್ಟ್ರೀಯ ತನಿಖಾ ದಳಕ್ಕೆ ನೀಡಿದೆ.

***************

ಮೇ ೧ ರಿಂದ ೪ರವರೆಗೆ ಮುಂಬೈನಲ್ಲಿರುವ ವಿಶ್ವ ಶ್ರವಣ, ದೃಶ್ಯ ಮತ್ತು ಮನರಂಜನಾ ಶೃಂಗಸಭೆ-ವೇವ್ಸ್ ಭಾರತವನ್ನು ಜಾಗತಿಕ ಸೃಜನಾಶೀಲತೆಯ ಕೇಂದ್ರ ಸ್ಥಾನದಲ್ಲಿ ಇರಿಸುತ್ತದೆ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ.ಎಲ್.ಮುರುಗನ್ ತಮ್ಮ ಲೇಖನದಲ್ಲಿ ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಪರಿಕಲ್ಪನೆಗೊಂಡಿರುವ ವೇವ್ಸ್, ಮಾಧ್ಯಮ ಮತ್ತು ಮನರಂಜನಾ ವಲಯವನ್ನು ಮರು ವ್ಯಾಖ್ಯಾನಿಸುವ ಒಂದು ಪರಿವರ್ತನಾ ಚಳವಳಿಯಾಗಿದೆ ಎಂದರು.

ಭಾರತದ ಮಾಧ್ಯಮ ಮತ್ತು ಮನರಂಜನಾ ಉದ್ಯಮ ವಹಿವಾಟು ೨.೭ ಟ್ರಿಲಿಯನ್ ರೂಪಾಯಿ ತಲುಪಿದ್ದು, ವೇವ್ಸ್ ೨೦೨೫ ಸೃಜನಾಶೀಲತೆ, ನಾವೀನ್ಯತೆ ಮತ್ತು ಉದ್ಯಮಶೀಲತೆಯಲ್ಲಿ ಮುನ್ನಡೆಸುವ ದೇಶದ ಉದ್ದೇಶವನ್ನು ಸೂಚಿಸುತ್ತದೆ ಎಂದು ಅವರು ಹೇಳಿದರು.

ಭಾರತದಲ್ಲಿ ವಿದೇಶಿ ಚಲನಚಿತ್ರ ನಿರ್ಮಾಣಕ್ಕೆ ಪ್ರೋತ್ಸಾಹ, ಸಹನಿರ್ಮಾಣ ಒಪ್ಪಂದಗಳು ಮತ್ತು ಚಲನಚಿತ್ರ ಸೌಲಭ್ಯ ಕಚೇರಿಯಂತಹ ಸರ್ಕಾರಿ ಉಪಕ್ರಮಗಳು ಜಾಗತಿಕ ಸೃಜನಕಾರರಿಗೆ

ಆದ್ಯತೆಯ ತಾಣವಾಗಿ ಭಾರತದ ಸ್ಥಾನಮಾನವನ್ನು ಬಲಪಡಿಸುತ್ತದೆ ಎಂದು ಡಾ.ಎಲ್.ಮುರುಗನ್ ಪ್ರತಿಪಾದಿಸಿದರು.

ಜಗತ್ತಿನಾದ್ಯಂತದ ನಾವೀನ್ಯಕಾರರು, ನೀತಿ ನಿರೂಪಕರರು, ಕಲಾವಿದರು ಮತ್ತು ಉದ್ಯಮ ನಾಯಕರನ್ನು ವೇವ್ಸ್ ಒಟ್ಟುಗೂಡಿಸುತ್ತದೆ. ಅಲ್ಲದೇ ಭಾರತದ ಮಾಧ್ಯಮ, ಮನರಂಜನಾ ಉದ್ಯಮಕ್ಕೆ ಹೊಸ ಯುಗದ ಉದಯವನ್ನು ವೇವ್ಸ್ ಪ್ರತಿನಿಧಿಸುತ್ತದೆ ಎಂದು ಸಚಿವರು ಹೇಳಿದರು.

***************

ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಇಂದು ಜ್ಞಾನ್ ಪೋಸ್ಟ್ ಸೇವೆಯನ್ನು ಪರಿಚಯಿಸಿದರು.

ಈ ಕುರಿತು ನವದೆಹಲಿಯಲ್ಲಿಂದು ಮಾಧ್ಯಮಗಳಿಗೆ ಮಾಹಿತಿ ನೀಡಿದ ಸಚಿವರು, ಇದು ದೇಶದಾದ್ಯಂತ ಅಂಚೆ ಕಚೇರಿಗಳ ಮೂಲಕ ಅರ್ಥಪೂರ್ಣವಾಗಿ ಪುಸ್ತಕಗಳು ಮತ್ತು ಶೈಕ್ಷಣಿಕ ಸಾಮಗ್ರಿಗಳನ್ನು ಸಾಗಿಸಲು ನೆರವಾಗಿದೆ ಎಂದರು.

ಜ್ಞಾನ್ ಪೋಸ್ಟ್ ಮೂಲಕ ಪುಸ್ತಕಗಳನ್ನು ಅಂಚೆ ಮೂಲಕ ಕಡಿಮೆ ವೆಚ್ಚದಲ್ಲಿ ಸಾಗಿಸಲಾಗುವುದು. ಇದರಿಂದ ಶೈಕ್ಷಣಿಕ ಸಂಪನ್ಮೂಲಗಳು ಎಲ್ಲರಿಗೂ ಲಭ್ಯವಾಗುವಂತೆ ಮಾಡಲು ಭಾರತೀಯ ಅಂಚೆ ತನ್ನ ಸೇವೆಯನ್ನು ಮತ್ತೊಮ್ಮೆ ದೃಢಪಡಿಸಿದೆ ಎಂದು ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದರು.

***************

ಯೆಮೆನ್ ಮೇಲೆ ಅಮೆರಿಕಾ ನಡೆಸಿದ ವೈಮಾನಿಕ ದಾಳಿಯಲ್ಲಿ ಕನಿಷ್ಠ ೮ ಮಂದಿ ಸಾವನ್ನಪ್ಪಿದ್ದು, ೧೨ ಮಂದಿ ಗಾಯಗೊಂಡಿದ್ದಾರೆ.

ಉತ್ತರ ಸನಾದ ಬನಿ ಅಲ್-ಹರಿತ್ ಜಿಲ್ಲೆಯಲ್ಲಿ ಮೂರು ಮನೆಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ. ದಾಳಿಯಲ್ಲಿ ಬದುಕಿಳಿದವರಿಗಾಗಿ ಶೋಧ ಕಾರ್ಯ ನಡೆಯುತ್ತಿದೆ. ರಾತ್ರಿಯಿಡೀ

ನಡೆದ ದಾಳಿಯಿಂದ ಯೆಮೆನ್ ಉತ್ತರ ಭಾಗದ ಹಲವು ಪ್ರದೇಶಗಳಲ್ಲಿ ಹಾನಿಯಾಗಿದೆ ಎಂದು ಹೌತಿ ಆಡಳಿತಾಧಿಕಾರಿಗಳು ತಿಳಿಸಿದ್ದಾರೆ.

***************

ಮುಂಬೈ ಷೇರು ಮಾರುಕಟ್ಟೆಯಲ್ಲಿಂದು ಷೇರು ಸಂವೇದಿ ಸೂಚ್ಯಂಕ-ಸೆನ್ಸೆಕ್ಸ್ ೧ ಸಾವಿರದ ೬ ಅಂಕಗಳು ಏರಿಕೆಯಾಗಿದ್ದು, ದಿನದ ಅಂತ್ಯಕ್ಕೆ ೮೦ ಸಾವಿರದ ೨೧೮ ಅಂಕಗಳು ದಾಖಲಾಗಿದೆ.

ಇದೇ ವೇಳೆ, ರಾಷ್ಟ್ರೀಯ ಸಂವೇದಿ ಸೂಚ್ಯಂಕ-ನಿಫ್ಟಿ ೨೮೯ ಅಂಕಗಳು ಏರಿಕೆ ಕಂಡಿದ್ದು, ದಿನದ ಅಂತ್ಯಕ್ಕೆ ೨೪ ಸಾವಿರದ ೩೨೮ ಅಂಕಗಳು ದಾಖಲಾಗಿದೆ.

***************

ರಾಜಸ್ಥಾನದ ಜೈಪುರದ ಸ್ವಾಯಿ ಮಾನ್ಸಿಂಗ್ ಕ್ರೀಡಾಂಗಣದಲ್ಲಿಂದು ನಡೆಯುತ್ತಿರುವ ಇಂಡಿಯನ್ ಪ್ರೀಮಿಯರ್ ಲೀಗ್-ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ಹಾಗೂ ಗುಜರಾತ್ ಟೈಟಾನ್ಸ್ ತಂಡಗಳು ಮುಖಾಮುಖಿಯಾಗಿವೆ.

ಟಾಸ್ ಗೆದ್ದ ರಾಜಸ್ಥಾನ ರಾಯಲ್ಸ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

*******ಮುಕ್ತಾಯ*******